ನಿಮ್ಮೊಡನೆ

# ನಕಲಿ ಔಷಧ, ಖೊಟ್ಟಿ ವೈದ್ಯ: ಹಾವಳಿ ತಡೆಗಟ್ಟಲು ಬೇಕು ಕಟ್ಟುನಿಟ್ಟಿನ ಕ್ರಮ

**ಜನರ ಜೀವದ ಜೊತೆ ಚೆಲ್ಲಾಟವಾಡುವ ನಕಲಿ ವೈದ್ಯರ ಹಾವಳಿ ನಿಯಂತ್ರಿಸಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು. ಅಂತೆಯೇ, ಖೊಟ್ಟಿ ಔಷಧಗಳನ್ನು ಪತ್ತೆಹಚ್ಚುವ ಕೆಲಸವೂ ಬಿರುಸು ಪಡೆಯಬೇಕು.**

‘ನಕಲಿ’ ಹಾವಳಿಯು ತಿನ್ನುವ ಆಹಾರ, ಕುಡಿಯುವ ನೀರು, ರೋಗನಿವಾರಣೆಗೆ ಬಳಸುವ ಔಷಧ ಒಳಗೊಂಡಂತೆ ಎಲ್ಲ ಕ್ಷೇತ್ರಗಳನ್ನೂ ಆವರಿಸಿದೆ. ಅಸಲಿ ಯಾವುದು, ನಕಲಿ ಯಾವುದು ಎಂದು ಗುರುತಿಸುವುದೇ ಜನಸಾಮಾನ್ಯರಿಗೆ ಸವಾಲಾಗಿದೆ. ನಿಯಂತ್ರಣ ವ್ಯವಸ್ಥೆಗಳು ಇದ್ದರೂ ಅವುಗಳ ಕಣ್ಣು ತಪ್ಪಿಸಿ ಮಾರುಕಟ್ಟೆಯಲ್ಲಿ ನಕಲಿ ಉತ್ಪನ್ನಗಳು ಬಿಕರಿಯಾಗುತ್ತಿರುವುದು ಜನರ ಸ್ವಾಸ್ಥ್ಯಕ್ಕೆ ಮಾರಕವಾಗಿ ಪರಿಣಮಿಸಿದೆ, ಅವರ ವಿಶ್ವಾಸದ ಬೇರುಗಳನ್ನು ಅಲುಗಾಡಿಸಿದೆ.

ನಮ್ಮ ಆಸ್ಪತ್ರೆಗಳಲ್ಲಿ ಬಳಸುತ್ತಿರುವ ಕೆಲವು ಔಷಧಗಳಲ್ಲಿ ಪ್ರಮಾಣಿತ ಗುಣಮಟ್ಟ ಇಲ್ಲ ಎಂಬುದು ಒಂದು ಬಗೆಯ ಸಮಸ್ಯೆಯಾದರೆ, ಮತ್ತೊಂದೆಡೆ ಔಷಧ ಮಾರುಕಟ್ಟೆಯಲ್ಲಿ ನಕಲಿ ಔಷಧಗಳ ಪೂರೈಕೆ ಜಾಲ ದೊಡ್ಡ ಮಟ್ಟದಲ್ಲಿ ಹರಡಿಕೊಂಡಿರುವುದು ಅದರ ತೀವ್ರತೆಯನ್ನು ಹೆಚ್ಚಿಸಿದೆ. ನಕಲಿ ಔಷಧಗಳ ಮಾರಾಟದಲ್ಲಿ ಹೊರ ರಾಜ್ಯಗಳ ಕೆಲವು ಕಂಪನಿಗಳು ಸಕ್ರಿಯವಾಗಿವೆಯಂತೆ. ಈ ಕುರಿತ ವರದಿಗಳು ಜನರ ನೆಮ್ಮದಿ ಕದಡಿವೆ.

ಈ ವರ್ಷದ ಜನವರಿಯಲ್ಲಿ 1,333 ಔಷಧ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿತ್ತು. ಅವುಗಳ ಪೈಕಿ 106 ಔಷಧ ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ ಎಂಬುದು ದೃಢಪಟ್ಟಿದೆ ಎಂಬ ಮಾಹಿತಿಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರೇ ಈಚೆಗೆ ಬಹಿರಂಗಪಡಿಸಿದ್ದಾರೆ. ಗುಣಮಟ್ಟ ಖಾತರಿಪಡಿಸುವ ಸಲುವಾಗಿ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳು ಔಷಧಗಳ ಮಾದರಿಗಳನ್ನು ನಿಯಮಿತವಾಗಿ ವಿಶ್ಲೇಷಣೆಗೆ ಒಳಪಡಿಸುತ್ತಿರುವುದು ಸಮಾಧಾನದ ಸಂಗತಿಯಾದರೂ ನಿಯಂತ್ರಣಕ್ಕೆ ಇನ್ನೂ ಬಿಗಿಯಾದ ಕ್ರಮಗಳು ಅಗತ್ಯ ಎಂಬುದನ್ನು ಗುಣಮಟ್ಟದ ಮಾನದಂಡಕ್ಕೆ ಸರಿದೂಗುವಲ್ಲಿ ಸೋತಿರುವ ಮಾದರಿಗಳು ಸೂಚಿಸುತ್ತವೆ.


ರಾಜ್ಯದ ವಿವಿಧೆಡೆ ಔಷಧ ನಿಯಂತ್ರಕರು ನಡೆಸಿದ ತಪಾಸಣೆಯಿಂದ ನಕಲಿ ಔಷಧಗಳ ನಿಜಬಣ್ಣ ಬಯಲಾಗಿದೆ. ಕೆಲವು ಪ್ರತಿಷ್ಠಿತ ಕಂಪನಿಗಳ ಔಷಧಗಳ ಹೆಸರನ್ನೇ ನಕಲು ಮಾಡಿ ಮಾರುಕಟ್ಟೆಗೆ ಪೂರೈಸುತ್ತಿರುವ ಅಂಶ ದೃಢಪಟ್ಟಿದೆ. ಅವುಗಳಲ್ಲಿ ಮೂಗಿಗೆ ಹಾಕುವ ದ್ರಾವಣ, ವಿಟಮಿನ್ ಡಿ 3 ಮಾತ್ರೆಗಳು, ನೋವುನಿವಾರಕ ಔಷಧ ಹಾಗೂ ಸೋಂಕುನಿವಾರಕ ದ್ರಾವಣಗಳು ಹೆಚ್ಚಾಗಿ ಸೇರಿವೆ ಎಂಬ ಅಂಶ ಹೊರಬಿದ್ದಿದೆ.

ಔಷಧ ಖರೀದಿಸುವಾಗ ಗ್ರಾಹಕರು ಹೆಚ್ಚು ಎಚ್ಚರಿಕೆ ವಹಿಸಬೇಕಾದ ಅಗತ್ಯವನ್ನು ನಕಲಿ ಔಷಧಗಳ ಹಾವಳಿಯು ನಮಗೆ ಮನವರಿಕೆ ಮಾಡಿಕೊಡುತ್ತದೆ. ವೈದ್ಯರಿಂದ ಚೀಟಿ ಪಡೆದೇ ಔಷಧ ಖರೀದಿಸಬೇಕು. ಔಷಧ ಖರೀದಿಸಿದ ಬಳಿಕ ಕಡ್ಡಾಯವಾಗಿ ಬಿಲ್ ಪಾವತಿಯನ್ನೂ ಪಡೆದುಕೊಳ್ಳಬೇಕು. ನಕಲಿ ಔಷಧ ಅಥವಾ ಪ್ರಮಾಣಿತ ಗುಣಮಟ್ಟ ಹೊಂದಿರದ ಬಗ್ಗೆ ಸಂಶಯ ಇದ್ದಲ್ಲಿ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ನಕಲಿ ಔಷಧಗಳ ನಿಯಂತ್ರಣಕ್ಕೆ ಇಂತಹ ಉಪಕ್ರಮಗಳು ಕೂಡ ನೆರವಾಗಬಲ್ಲವು.

ನಕಲಿ ಔಷಧ ತಯಾರಿಸುವ ಕೈಗಳು ನಮಗೆ ಕಾಣುವುದಿಲ್ಲ, ಮರೆಯಲ್ಲಿ ಎಲ್ಲೋ ದೂರದಲ್ಲಿ ಇರುತ್ತವೆ. ಆದರೆ ನಮ್ಮ ಕೈ ಹಿಡಿದು ನಾಡಿಮಿಡಿತ ನೋಡುವ, ಔಷಧ ಚೀಟಿ ಬರೆದುಕೊಡುವ ಕೈಗಳೇ ‘ನಕಲಿ’ಯಾದರೆ... ಹೌದು, ಖೊಟ್ಟಿ ವೈದ್ಯರ ಹಾವಳಿಯು ಖೊಟ್ಟಿ ಔಷಧಕ್ಕಿಂತಲೂ ಹೆಚ್ಚು ಅಪಾಯಕಾರಿ. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನಕಲಿ ವೈದ್ಯರ ಕಾರುಬಾರು ಹೆಚ್ಚಾಗಿದೆ ಎಂಬ ವರದಿಗಳು ಮತ್ತಷ್ಟು ತಲ್ಲಣ ಮೂಡಿಸುವಂತಹವು.

‘ನಕಲಿ ವೈದ್ಯರಿಂದ ಹಳ್ಳಿಗಳ ಮುಗ್ಧ ಜನರ ಜೀವ ಅಪಾಯದಲ್ಲಿದೆ. ಖೊಟ್ಟಿ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಲು ತಕ್ಷಣ ಮುಂದಾಗಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಈಚೆಗೆ ಹೈಕೋರ್ಟ್ ತಾಕೀತು ಮಾಡಿರುವುದು ಈ ಸಮಸ್ಯೆಯ ತೀವ್ರತೆಯನ್ನು ಸೂಚಿಸುತ್ತದೆ. ‘...ಅರ್ಹತೆ ಇಲ್ಲದ ವ್ಯಕ್ತಿಗಳು ನಡೆಸುತ್ತಿರುವ ಕ್ಲಿನಿಕ್‌ಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಈ ದಿಸೆಯಲ್ಲಿ ಕೈಗೊಂಡ ಕ್ರಮಗಳ ವರದಿಯನ್ನೂ ಕೋರ್ಟ್‌ಗೆ ಸಲ್ಲಿಸಬೇಕು’ ಎಂದೂ ನ್ಯಾಯಪೀಠ ನಿರ್ದೇಶಿಸಿರುವುದು ಸರಿಯಾಗಿದೆ. ‘ಕ್ರಮ ಜರುಗಿಸಿ’ ಎಂದಷ್ಟೇ ಹೇಳಿದರೆ ಎಚ್ಚೆತ್ತುಕೊಳ್ಳುವ ಸೂಕ್ಷ್ಮತೆಯನ್ನು ಅಧಿಕಾರಿಶಾಹಿ ಉಳಿಸಿಕೊಂಡಿಲ್ಲ ಎಂಬುದು ಎಲ್ಲರ ಅನುಭವಕ್ಕೂ ಬಂದಿರುವಂತಹ ಸಂಗತಿ.

ಎಸ್‌ಎಸ್‌ಎಲ್‌ಸಿವರೆಗೆ ಓದಿರುವ ವ್ಯಕ್ತಿಯೊಬ್ಬರು ಭಾರತೀಯ ಪರ್ಯಾಯ ಔಷಧ ಮಂಡಳಿ ನೀಡಿದೆ ಎನ್ನಲಾದ ಪ್ರಮಾಣಪತ್ರ ಇಟ್ಟುಕೊಂಡು ವೈದ್ಯ ಪದ್ಧತಿ ಅನುಸರಿಸುತ್ತಿರುವುದನ್ನು ಗಮನಿಸಿದ ನ್ಯಾಯಾಲಯವು ಸ್ವಘೋಷಿತ ನಕಲಿ ವೈದ್ಯರ ಹಾವಳಿ ನಿಯಂತ್ರಣಕ್ಕೆ ಖಡಕ್ ನಿರ್ದೇಶನ ನೀಡಿದೆ. ಖೊಟ್ಟಿ ವೈದ್ಯರ ಹಾವಳಿ ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚಿಗೆ ಇದೆ ಎಂದು ವರದಿಗಳು ಹೇಳುತ್ತವೆಯಾದರೂ ಕೋಲಾರ ಜಿಲ್ಲೆಯಲ್ಲಿ 115 ನಕಲಿ ಕ್ಲಿನಿಕ್ ಮತ್ತು ಖೊಟ್ಟಿ ವೈದ್ಯರನ್ನು ಆರೋಗ್ಯ ಇಲಾಖೆ ಅಧಿಕಾರಿಗಳು ಪತ್ತೆಹಚ್ಚಿರುವುದನ್ನು ಗಮನಿಸಿದರೆ, ಜನರ ಜೀವದ ಜತೆ ಚೆಲ್ಲಾಟ ಆಡುವ ಖೊಟ್ಟಿಗಳ ಹಾವಳಿ ರಾಜ್ಯದಾದ್ಯಂತ ಹಬ್ಬಿರಬಹುದು ಎಂಬ ಅನುಮಾನ ಮೂಡುತ್ತದೆ. ಖೊಟ್ಟಿಗಳ ಹೆಡೆಮುರಿ ಕಟ್ಟುವ ಕೆಲಸ ಯುದ್ಧೋಪಾದಿಯಲ್ಲಿ ಆಗಬೇಕು.



ಈಶ್ವರ್

■ **ಎನ್. ಉದಯಕುಮಾರ್**